# ಸರ್ಕಾರಿ ಪ್ರೌಢಶಾಲೆ, ಹೆಬ್ಬಲಗುಪ್ಪೆ, ಹೆಚ್.ಡಿ.ಕೋಟೆ

**ವಿಷಯ: ವಿಜ್ಞಾನ ಸಂಕಲನಾತ್ಮಕ ಮೌಲ್ಯಮಾಪನ–1 ಅಂಕಗಳು: 40**

**ತರಗತಿ: 8 ಸಮಯ:1:30 ಗಂಟೆ**

**I. ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. 1x4=4**

1. ವಿಶ್ವ ಜಲದಿನ ____________

ಅ) ಏಪ್ರಿಲ್ 20 ಬ) ಜನವರಿ 1 ಡ) ಮಾರ್ಚ್ 22 ಕ) ಮಾರ್ಚ್ 21

2. ಜವದ ಅಂತರ್ ರಾಷ್ಟ್ರೀಯ ಏಕಮಾನ ____________

ಅ) m/s ಬ) $m/s^2$ ಡ) N/m ಕ) $N/m^2$

3. ಸಾಪೇಕ್ಷ ಪರಮಾಣು ರಾಶಿಯನ್ನು ಅಳೆಯಲು ಬಳಸುವ ಆದರ್ಶಮಾನ

ಅ) ${}_1H^1$ ಬ) ${}_6C^{12}$ ಡ) ${}_7N^{14}$ ಕ) ${}_8O^{16}$

4. ರಾಕೆಟ್‌ನ ಚಲನೆಯು ನ್ಯೂಟನ್‌ನ ಈ ನಿಯಮದನ್ವಯ ಕಾರ್ಯ ನಿರ್ವಹಿಸುತ್ತದೆ ________

ಅ) 1ನೇ ಬ) 2ನೇ ಡ) 3ನೇ ಕ) ಎಲ್ಲವು

**II. ಕೆಳಗಿನ ಪ್ರಶ್ನೆಗಳನ್ನು ಒಂದು ವಾಕ್ಯದಲ್ಲಿ ಉತ್ತರಿಸಿ. 1x3=3**

5. ಮರುಭೂಮೀಕರಣ ಎಂದರೇನು?

6. ಅತೀ ಹೆಚ್ಚು ಕಾರ್ಬನ್ ಪ್ರಮಾಣ ಹೊಂದಿರುವ ಕಲ್ಲಿದ್ದಲನ್ನು ಹೆಸರಿಸಿ.

7. ಸಮಸ್ಥಾನಿಗಳೆಂದರೇನು?

**III. ಕೆಳಗಿನ ಪ್ರಶ್ನೆಗಳನ್ನು ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ. 2x4=8**

8. ಕ್ಯಾಥೋಡ್ ಕಿರಣಗಳ ಉತ್ಪಾದನೆಯನ್ನು ತೋರಿಸುವ ವಿಸರ್ಜನಾ ನಳಿಕೆಯ ಚಿತ್ರ ಬರೆಯಿರಿ.

9. ನೀರಿನ ಅಣು ರಾಶಿಯನ್ನು ಲೆಕ್ಕಾಚಾರ ಮಾಡಿ. ( ರಾಶಿ ಸಂಖ್ಯೆ H=1, O=16)

10. ಒಂದು ಕಾಯವು ಸಮಕಾಲದಲ್ಲಿ ಸಮದೂರ ಕ್ರಮಿಸುತ್ತಿದೆ ಎಂದು ಭಾವಿಸಿ. ಕಾಯದ ದೂರ–ಕಾಲ ನಕ್ಷೆಯನ್ನು ಬಿಡಿಸಿ.

11. ಜಡತ್ವ ಎಂದರೇನು? ಒಂದು ಉದಾಹರಣೆ ಕೊಡಿ.

**IV ಕೆಳಗಿನ ಪ್ರಶ್ನೆಗಳನ್ನು ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ. 3x4=12**

12. ಕೆಳಗೆ ನೀಡಲಾಗಿರುವ ಜೀವಿಗಳನ್ನು ಬಳಸಿ ಆಹಾರ ಜಾಲವೊಂದನ್ನು ರಚಿಸಿ. ಇವುಗಳಲ್ಲಿ ಚತುರ್ಥಕ ಭಕ್ಷಕವನ್ನು ಹೆಸರಿಸಿ.

ಹಾವು, ಹುಲ್ಲು, ಮೊಲ, ಕಪ್ಪೆ, ಹದ್ದು, ಇಲಿ, ಮಿಡತೆ.

13. **a)** ದ್ವಿನಾಮ ನಾಮಕರಣವನ್ನು ಸಾರ್ವತ್ರಿಕವಾಗಿ ಬಳಸಲು ಕಾರಣವಾದ 2 ಅಂಶಗಳನ್ನು ತಿಳಿಸಿ.

**b)** ಮಾವಿನ ಮರದ ವೈಜ್ಞಾನಿಕ ಹೆಸರೇನು?

14. ಸೂಕ್ಷ್ಮಾಣು ಜೀವಿಗಳಿಂದ ಮಾನವನಿಗಾಗುವ ಯಾವುದಾದರೂ 3 ಉಪಯೋಗಗಳನ್ನು ಪಟ್ಟಿಮಾಡಿ.

15. ಕೆಳಗಿನ ಕೋಷ್ಟಕವನ್ನು ಪೂರ್ಣಗೊಳಿಸಿ.

| ಕ್ರ.ಸಂ | ಸಂದರ್ಭ | ರೂಪಾಂತರಗೊಳ್ಳುವ ಮುನ್ನ ಶಕ್ತಿಯ ಹೆಸರು | ರೂಪಾಂತರಗೊಂಡ ನಂತರ ಶಕ್ತಿಯ ಹೆಸರು |
|---|---|---|---|
| 1 | ದ್ಯುತಿಸಂಶ್ಲೇಷಣೆ | | |
| 2 | ಅಣೆಕಟ್ಟಿನಿಂದ ಹರಿದು ಬರುತ್ತಿರುವ ನೀರು | | |
| 3 | ಉರಿಯುತ್ತಿರುವ ಬೆಂಕಿಕಡ್ಡಿ | | |

## V. ಕೆಳಗಿನ ಪ್ರಶ್ನೆಗಳನ್ನು ನಾಲ್ಕು-ಐದು ವಾಕ್ಯಗಳಲ್ಲಿ ಉತ್ತರಿಸಿ. 4x2=8

16. ಸಸ್ಯ ಜೀವಕೋಶದ ಚಿತ್ರ ಬರೆದು ಭಾಗಗಳನ್ನು ಗುರುತಿಸಿ.

ಎ) ದೊಡ್ಡ ಕೇಂದ್ರ ರಸದಾನಿ ಬ) ಎಂಡೋಪ್ಲಾಸ್ಮಿಕ್ ರೆಟಿಕ್ಯುಲಮ್ ಡ) ಕೋಶಕೇಂದ್ರ ಕ) ಮೈಟೋಕಾಂಡ್ರಿಯಾ

17. ಪ್ರಯೋಗಶಾಲೆಯಲ್ಲಿ ಕ್ಲೋರಿನ್ ಅನಿಲದ ತಯಾರಿಕೆಯನ್ನು ತೋರಿಸುವ ಚಿತ್ರ ಬರೆದು ಯಾವುದಾದರೂ 4 ಭಾಗಗಳನ್ನು ಗುರುತಿಸಿ.

## VI. ಕೆಳಗಿನ ಪ್ರಶ್ನೆಗಳನ್ನು ಆರು-ಏಳು ವಾಕ್ಯಗಳಲ್ಲಿ ಉತ್ತರಿಸಿ. 5x1=5

18. ಎ) ಜೋಸೆಫ್ ಪ್ರೀಸ್ಟ್ಲಿರವರು ಆಕ್ಸಿಜನನ್ನು ಹೇಗೆ ತಯಾರಿಸಿದರು? ರಾಸಾಯನಿಕ ಸಮೀಕರಣದೊಂದಿಗೆ ತೋರಿಸಿ.

ಬ) ಕೆಳಗಿನ ರಾಸಾಯನಿಕ ಕ್ರಿಯೆಗಳಿಗೆ ಸರಿದೂಗಿಸಿದ ಸಮೀಕರಣ ಬರೆಯಿರಿ.

1) ಗಂಧಕದ ಪುಡಿಯನ್ನು ಗಾಳಿಯಲ್ಲಿ ಉರಿಸಿದೆ.

2) ಪ್ರನಾಳವೊಂದರಲ್ಲಿ ಮೆಗ್ನೀಷಿಯಂ ಸಲ್ಫೇಟ್ ದ್ರಾವಣವನ್ನು ತೆಗೆದುಕೊಂಡು ಅದಕ್ಕೆ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ಬೆರೆಸಿದಾಗ ಬಿಳಿಯ ಪ್ರಕ್ಷೇಪ ಉಂಟಾಗಿದೆ.

3) ಸತುವು ಹೈಡ್ರೋಕ್ಲೋರಿಕ್ ಆಮ್ಲದೊಂದಿಗೆ ವರ್ತಿಸಿದೆ.

*******************************************************************